## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ದಿನಾಂಕ:24-03-2021

## ವಾರ್ಡ್-85ರ ವಾರ್ಡ್ ಸಮಿತಿ ಸಭೆ

### *ಸಭೆಯ ನಡವಳಿಗಳು*

**ವಿಷಯ:-** ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:24-03-2021 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಸಭೆಗೆ ಹಾಜರಾಗಿದ್ದವರ ವಿವರಗಳು:**

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಡಾ॥ಸುರೇಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ರಾಚಿಪ | ಕಾರ್ಯದರ್ಶಿ |
| 3 | ಶ್ರೀ.ದೇವರಾಜ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ರಾಮಕೃಷ್ಣ | ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ |
| 5 | ಶ್ರೀ.ರಘುನಂದನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 6 | ಶ್ರೀ.ವೆಂಕಟೇಶ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಅಧ್ಯಕ್ಷರು |
| 7 | ಶ್ರೀ.ವೆಂಕಟೇಶ್.ಹೆಚ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಕಾರ್ಯದರ್ಶಿ |
| 8 | ಶ್ರೀ.ಶಿವಾರೆಡ್ಡಿ | ಬೆಮಲ್ ಲೇಔಟ್ |
| 9 | ಶ್ರೀ.ದೇವರಾಜ್ | ಬೆಮಲ್ ಲೇಔಟ್ |
| 10 | ಶ್ರೀ.ಸಿ.ಟಿ.ಮಲ್ಲೇಶ್ | ಎ.ಇ.ಸಿ.ಎಸ್ ಲೇಔಟ್ |

ಶ್ರೀ.ಡಾ॥ಸುರೇಶ್.ಆರ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸಭೆಯಲ್ಲಿ ಹಾಜರಿದ್ದ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಹಾಗೂ ಸಂಘಸಂಸ್ಥೆಯ ಮುಖ್ಯಸ್ಥರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

Scanned with CamScanner

1. ಸಭೆಯಲ್ಲಿ ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಶ್ರೀನಿವಾಸ್ ರೆಡ್ಡಿ ಲೇಔಟ್‌ನಲ್ಲಿ ಮುಖ್ಯರಸ್ತೆಯಲ್ಲಿ ಕಲ್ವರ್ಟ್ ಕಾಮಗಾರಿ ಪ್ರಾರಂಭವಾಗಿದ್ದು, ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿದರು.
2. ಶ್ರೀ.ಶಿವರೆಡ್ಡಿ, ಬೆಮಲ್ ಲೇಔಟ್ ರವರು ಬೆಮಲ್ ಲೇಔಟ್‌ನ ಪಾರ್ಕ್‌ನಲ್ಲಿ ಪಾದಚಾರಿ ಮಾರ್ಗದ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಮತ್ತು ಬೆಮಲ್ ಲೇಔಟ್ ಪಾರ್ಕ್‌ನಲ್ಲಿ ಮಕ್ಕಳ ಆಟದ ಪೀಠೋಪಕರಣಗಳ ಕಾಮಗರಿಯ ಅಂದಾಜು ಪಟ್ಟಿಯನ್ನು ನೀಡಲು ಕೋರಿರುತ್ತಾರೆ.
3. ಸಭೆಯಲ್ಲಿ ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ರಸ್ತೆ ಮೂಲಭೂತ ಸೌಕರ್ಯ ರವರ ಕೆಲವೊಂದು ಕಾಮಗಾರಿಗಳು ಮಂದಗತಿಯಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ವಿಚಾರವಾಗಿ ಶ್ರೀ.ವೆಂಕಟೇಶ್ ರವರು ದೂರವಾಣಿ ಮುಖಾಂತರ ಗುತ್ತಿಗೆದಾರರಿಗೆ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿರುತ್ತಾರೆ.
4. ಸಭೆಯಲ್ಲಿ ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಎ.ಇ.ಸಿ.ಎಸ್ ಲೇಔಟ್ ಬಿ ಬ್ಲಾಕ್‌ನ ಪಾರ್ಕ್ ನಿರ್ವಹಣೆಯು ಸರಿಯಾಗಿ ರೀತಿಯಲ್ಲಿ ನಿರ್ವಹಿಸದೇ ಇರುವುದರಿಂದ ತೋಟಗಾರಿಕೆ ಇಲಾಖೆ ರವರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.
5. ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ಎ.ಇ.ಸಿ.ಎಸ್ ಲೇಔಟ್‌ನ ಪಾರ್ಕ್‌ನಲ್ಲಿ ಮಕ್ಕಳ ಆಟದ ಪೀಠೋಪಕರಣಗಳ ಅಳವಡಿಸುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ನೀಡಲು ಕೋರಿರುತ್ತಾರೆ.
6. ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ತಿಳಿಸಿರುವಂತೆ ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ಸಂಸ್ಥೆಯವರು ರಸ್ತೆ ಅಗೆದು ಸರಿಯಾದ ರೀತಿಯಲ್ಲಿ ರಸ್ತೆ ಪುನಃಶ್ಚೇತನ ಮಾಡಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು.
7. ಶ್ರೀ.ಶಿವರೆಡ್ಡಿ, ಬೆಮಲ್ ಲೇಔಟ್ ರವರು ಬೆಮಲ್ ಲೇಔಟ್‌ನಲ್ಲಿ ಹೊಸದಾಗಿ ಕಲ್ವರ್ಟ್‌ಗಳನ್ನು ನಿರ್ಮಿಸಲು ಕೋರಿದರು.
8. ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಎ.ಇ.ಸಿ.ಎಸ್ ಬಡಾವಣೆಯ ವ್ಯಾಪ್ತಿಯಲ್ಲಿ ಕಲ್ವರ್ಟ್‌ಗಳನ್ನು ನಿರ್ಮಿಸಿ ಸದರಿ ಸ್ಥಳದಲ್ಲಿ ಉಳಿದಿರುವ ಡೆಬ್ರಿಸ್‌ನ್ನು ರಸ್ತೆಯಲ್ಲಿ ಬಿಟ್ಟಿರುವುದು ಕಂಡುಬಂದಿದ್ದು, ಅದನ್ನು ತೆರವುಗೊಳಿಸಲು ಕೋರಿದರು.
9. ಇಂದಿನ ಸಭೆಯಲ್ಲಿ ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಕೋರಿರುವಂತೆ ಎ.ಇ.ಸಿ.ಎಸ್ ಬಡಾವಣೆಯ 60 ಅಡಿ ರಸ್ತೆ ಪಾದಚಾರಿ ಮಾರ್ಗದಲ್ಲಿ ಅಳವಡಿಸಿರುವ ಅಂಗಡಿ ಮುಗಟ್ಟುಗಳನ್ನು ತೆರವುಗೊಳಿಸಲಾಗಿದ್ದು, ಆದರೆ ಸದರಿ ಸ್ಥಳದಲ್ಲಿ ಮತ್ತೆ ಬೀದಿ ವ್ಯಾಪರಿಗಳು ಅಂಗಡಿ ಮುಗಟ್ಟುಗಳು ಇರಿಸಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಪೋಲಿಸ್ ಠಾಣೆ ರವರಿಗೆ ಪತ್ರದ ಬರೆದು ಪುಟ್‌ಪಾತ್ ತೆರವು ಕಾರ್ಯಚಾರಣೆಗೆ ಖುದ್ದಾಗಿ ಪೋಲಿಸ್ ಮೇಲು ಅಧಿಕಾರಿಗಳು ಸಮ್ಮುಖದಲ್ಲಿ ತೆರವುಗೊಳಿಸಲು ಕೋರಿದರು.

Scanned with CamScanner

10.ಶ್ರೀ.ಸುರೇಶ್ ಅಧ್ಯಕ್ಷಕರು ರವರು ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಿಸಲು ಸೂಚಿಸಿದರು.

ಸಭೆಯಲ್ಲಿ ಇತರ ಇಲಾಖೆಯವರಾದ ಬೆಸ್ಕಾಂ, ಪೋಲಿಸ್ ಮತ್ತು ತೋಟಗಾರಿಕೆ ಇಲಾಖೆ ರವರಿಗೆ ಮುಂದಿನ ಸಭೆಗೆ ಹಾಜರಾಗಲು ನೋಟೀಸ್ ಜಾರಿ ಮಾಡಲು ಶ್ರೀ ಸುರೇಶ್ ಅಧ್ಯಕ್ಷಕರು ಸೂಚಿಸಿದರು.

ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಕಮಿಟಿ ಅಧ್ಯಕ್ಷರು
ವಾರ್ಡ್ ನಂ.85

Scanned with CamScanner